**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ**
**ಕನಕಪುರ**
**ಸಿ.ಸಿ ನಂಃ 301/2008**

| | | | |
|---|---|---|---|
| **ಚಾಸಾ ಃ** | **6** | **ಪ್ರಾಸಾಃ-** | **3** |

| | |
|---|---|
| ಹೆಸರು | ಮಂಜುನಾಥ್ ಹೆಚ್. ಆರ್ |
| ತಂದೆಯ ಹೆಸರು | ರಾಮಯ್ಯ |
| ವಯಸ್ಸು | **43** |
| ಉದ್ಯೋಗ | ಅಬಕಾರಿ ಉಪನಿರೀಕ್ಷಕರು |
| ವಿಳಾಸ | ಚಾಮರಾಜಪೇಟೆ |

**ದಿಃ 27.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು 2000 ರಿಂದ 2005 ರವರೆಗೆ ಕನಕಪುರ ದಲ್ಲಿ ಅಬಕಾರಿ ಕಾನ್ಸ್ ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ **05.10.2002** ರಂದು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ ನಿವೇದನ ಪತ್ರವನ್ನು ಚಾಸಾ-**7** ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು **180** ಎಂ ಎಲ್ ನ ಮಾದರಿ ಸೇಂದಿ ಬಾಟಲ್ ಮತ್ತು ನಿವೇದನಾ ಪತ್ರವನ್ನು ತೆಗೆದುಕೊಂಡು ಹೋಗಿರುತ್ತೇನೆ.

ದಿನಾಂಕ **17.10.2002** ರಂದು ರಾಸಾಯನಿಕ ವಿಶ್ಲೇಷಣಾ ವರದಿ ಮತ್ತು ಸ್ಯಾಂಪಲ್ ಅನ್ನು ವಾಪಸ್ ತೆಗೆದುಕೊಂಡು ಬಂದು ಚಾಸಾ-**2** ರವರಿಗೆ ನೀಡಿರುತ್ತೇನೆ.

ಸಾಕ್ಷಿಯು **FSL Report** ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**3** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು.ಮಾ. **1** ಅನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ Sri. P.S.D. ವಕೀಲರಿಂದಃ**

ದಿನಾಂಕ **05.10.2002** ರಂದು ನಾನು ರಾಸಾಯನಿಕ ಪರೀಕ್ಷೆಗೆ ಮಾದರಿ ಬಾಟಲ್ ಅನ್ನು ತೆಗೆದುಕೊಂಡು ಹೋಗಿರುತ್ತೇನೆ. ರಾಸಾಯನಿಕ ಪರೀಕ್ಷೆಗೆ **180** ಎಂ ಎಲ್ ನ ಮಾದರಿ ಬಾಟಲ್ ಅನ್ನು ತೆಗೆದುಕೊಂಡು ಹೋಗಿರುತ್ತೇನೆ. **FSL** ವರದಿಯನ್ನು ನೋಡಿರುವುದಿಲ್ಲ. ನಿಪಿ-**3** ರಲ್ಲಿ **650** ಎಂ ಎಲ್ ಎಂದು ನಮೂದಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-**3** ಅನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢಿಕರೀಸುತ್ತೇನೆ.)**

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**

ಓ ಹೇ ಕೇ ಸ ಇ